## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:119, ಸರ್ವಜ್ಞನಗರ
## ವಾರ್ಡ್ ಸಮಿತಿ ಸಭೆ, ದಿನಾಂಕ:03-09-2022 ರ ಸಭಾ ನಡವಳಿಗಳು

ದಿನಾಂಕ: 03-09-2022 ರಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್-79 ಸರ್ವಜ್ಞನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಎಂ.ಎಂ.ರಸ್ತೆಯಲ್ಲಿರುವ ಪಾಲಿಕೆಯ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಆರ್.ಡಬ್ಲ್ಯೂ.ಎ**

1. ಶ್ರೀ.ಮುರಳಿ ಆರ್.ಡಬ್ಲ್ಯೂ.ಎ
2. ಶ್ರೀ.ಮುರಳೀಧರ್ ಆರ್.ಡಬ್ಲ್ಯೂ.ಎ
3. ಶ್ರೀನಾರಾಯಣ ಸ್ವಾಮಿ ಆರ್.ಡಬ್ಲ್ಯೂ.ಎ
4. ಶ್ರೀ.ಸಂಜೋಗ್ ಆರ್.ಡಬ್ಲ್ಯೂ.ಎ
5. ಶ್ರೀಮತಿ.ಚಂದ್ರಿಕಾ ರಾಜಾ
6. ಶ್ರೀ.ಪದ್ಮನಾಭ ಆರ್.ಡಬ್ಲ್ಯೂ.ಎ

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು**

1. ಶ್ರೀ.ಅಮರೇಶ್ ನೋಡೆಲ್ ಅಧಿಕಾರಿಗಳು, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
2. ಶ್ರೀ.ನರಸಿಂಹಯ್ಯ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
3. ಶ್ರೀಮತಿ.ದಿವ್ಯ ಕಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಮುನಿ ಯೆಲ್ಲಪ್ಪ, ಕಂದಾಯ ವಸೂಲಿಗಾರರು
5. ಶ್ರೀ.ಮಲ್ಲಣ್ಣ, ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲಾ ಇಲಾಖೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು. ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಸಭೆಯಲ್ಲಿ ತಿಳಿಸಲು ಕೋರಿ ಸಭೆಯನ್ನು ಆರಂಭಿಸಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಘನತ್ಯಾಜ್ಯ ನಿರ್ವಹಣೆ (SWM)** | |
| 1 | • ಶ್ರೀ.ಮುರಳೀಧರ್ ಸದಸ್ಯರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ಹೆಚ್ಚಾಗಿದ್ದು, ಸಮರ್ಪಕವಾಗಿ ಕಸ ವಿಲೇವಾರಿಯನ್ನು ನಿರ್ವಹಿಸಲು ಸೂಚಿಸಿದರು.<br>• ಎಸ್.ಬಿ.ಐ ಬ್ಯಾಂಕ್ ಎದುರು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲ ಮೂತ್ರ ವಿಸರ್ಜನೆ ಹೆಚ್ಚಾಗಿದ್ದು, ಇದನ್ನು ನಿಯಂತ್ರಿಸಲು ಶ್ರೀ.ಮುರಳೀಧರ್ ರವರು ಕೋರಿದರು.<br>• ಅದರಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಮಾರ್ಷಲ್‌ಗಳೊಂದಿಗೆ ಸದರಿ ವಿಷಯದ ಬಗ್ಗೆ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. | **Junior/Senior Health Inspector** |
| | **ಕಾಮಗಾರಿ ಇಲಾಖೆ (Engineering)** | |
| 1 | ಶ್ರೀ.ಸಂಜೋಗ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಇರುವ ರಸ್ತೆಗುಂಡಿಗಳನ್ನು ಮುಚ್ಚಲು ಹಾಗೂ ಸೂಕ್ತ ಕ್ರಮ ಕೈಗೊಳ್ಳಲು ಕೋರಲಾಯಿತು.<br>ಶ್ರೀ.ಸಂಜೋಗ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಡೆಬ್ರೀಸ್‌ನ್ನು ತೆರವುಗೊಳಿಸಲು ಕೋರಿದರು. | **Assistant Engineer-BBMP** |

| | | |
|---|---|---|
| 2 | ಶ್ರೀ.ನಾರಾಯಣಸ್ವಾಮಿ ರವರು ಮಾತನಾಡಿ ದೊಡ್ಡಿಗುಂಟ ಮುಖ್ಯರಸ್ತೆಯಲ್ಲಿರುವ ಡೆಬ್ರೀಸ್ ತೆರವುಗೊಳಿಸಲು ತಿಳಿಸಿದರು. ಹಾಗೂ ಸಹಾಯಕ ಅಭಿಯಂತರರಿಗೆ ಮಾತನಾಡಿ ಡೆಬ್ರೀಸ್‌ನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. | **Assistant Engineer-BBMP** |
| 3 | ಕಾಕ್ಸ್‌ಟೌನ್‌ನ ಎಂ.ಎಂ.ರಸ್ತೆಯಲ್ಲಿರುವ ನಿರ್ಮಾಣವಾಗಿರುವ ಮಾರುಕಟ್ಟೆ ಕಟ್ಟಡವನ್ನು ಶೀಘ್ರವಾಗಿ ಪ್ರಾರಂಭಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಶ್ರೀಮತಿ.ಚಂದ್ರಿಕಾ ರಾಜ್ ರವರು ಪುನಃ ಪ್ರಸ್ತಾವನೆ ಸಲ್ಲಿಸುತ್ತಿರುತ್ತಾರೆ. | **Assistant Engineer-BBMP** |
| 4 | ಶ್ರೀ.ಮುರಳಿ ರವರು ಮಾತನಾಡಿ ಬೆಂಗಳೂರಿನಲ್ಲಿ ಮಳೆಯಾಗುತ್ತಿರುವುದರಿಂದ ವಾರ್ಡ್‌ ವ್ಯಾಪ್ತಿಯಲ್ಲಿ ಹಳೆಯ ಅಥವಾ ಬೀಳುವ ಹಂತದ ಕಟ್ಟಡಗಳು ಇದ್ದಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಲು ತಿಳಿಸಿದರು. | **Assistant Engineer-BBMP** |
| | **ಬಿ.ಬಿ.ಎಂ.ಪಿ ಸ್ಟ್ರೀಟ್‌ಲೈಟ್ಸ್ (Street Lights)** | |
| 1 | ಶ್ರೀ.ನಾರಾಯಣಸ್ವಾಮಿ ವಾರ್ಡ್‌ ವ್ಯಾಪ್ತಿಯಲ್ಲಿ ಅನೇಕ ಕಡೆಗಳಲ್ಲಿ ಬೀದಿ ದೀಪಗಳು ಇಲ್ಲದೇ ಇರುವುದಿಲ್ಲವಾದ್ದರಿಂದ ಕೂಡಲೇ ಸದರಿ ರಸ್ತೆಗಳಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಸೂಚಿಸಲಾಯಿತು. | **Assistant Engineer-Street Lights** |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ. ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿಗಳು**
ಶ್ರೀ.ನರಸಿಂಹಯ್ಯ
ಸಹಾಯಕ ಅಭಿಯಂತರರು(ಪ್ರಭಾರ)
ವಾರ್ಡ್ ಸಂಖ್ಯೆ:79 ಸರ್ವಜ್ಞನಗರ

**ಅಧ್ಯಕ್ಷರು**
ಶ್ರೀ.ಅಮರೇಶ್
ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:79–ಸರ್ವಜ್ಞನಗರ